**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS** 6/2022 **PW**-1

**ದಿಃ** 02.06.2026 **ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ ಎಸ ಅಂಗಡಿರವರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂಬರ 8 ರಲ್ಲಿ ಹೇಳಿರುವ ವಿಷಯವನ್ನು ಯಾವ ಆಧಾರದ ಮೇಲೆ ಬರೆಸಿದೀರಿ ಎಂದರೆ ಸಾಕ್ಷಿ ನಾವು ಆ ಸೇಲ್ ಡಿಡ್ ತೆಗೆಯಿಸಿದ್ದು ಆ ಸಮಯದಲ್ಲಿ ನನ್ನ ಮಾವ ಒಡ್ಡಕಣ್ಣನವರ ಇವರು ಕಡಿಮೆ ಬೆಲೆ ತೋರಿಸಿರುತ್ತಾರೆಂದು ಹೇಳಿದರು ಎಂದು ಸಾಕ್ಷಿ ನುಡಿಯುತ್ತಾರೆ. ಈಗ ನಾನು ಹೇಳಿದ ಕ್ರಯ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ ಕ್ರಯ ಪತ್ರವನ್ನು ಎಲ್ಲಿ ತೆಗೆಯಿಸಿದ್ದೀರಿ ಎಂದರೆ ಸಾಕ್ಷಿ ಮಿನಿ ವಿಧಾನಸೌಧದಲ್ಲಿ ನಾನೇ ತೆಗೆಯಿಸಿದ್ದೇನೆ ಎನ್ನುತ್ತಾರೆ. ಸದರಿ ಕ್ರಯ ಪತ್ರವನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಓದಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ತಾವು ನಿಶಾನೆಗಳನ್ನಾಗಿ ಗುರ್ತಿಸಿಕೊಂಡಿರುವ ದಾಖಲೆಗಳನ್ನು ಕೊಟ್ಟು ಅವುಗಳಲ್ಲಿ ಯಾವುದು ಕ್ರಯ ಪತ್ರ ಎಂದರೆ ಸಾಕ್ಷಿ ನಿಶಾನೆ ಪಿ 1 ರಿಂದ ನಿಶಾನೆ ಪಿ 4 ಗಳನ್ನು ತೋರಿಸಿ ನಾನು ಇದನ್ನೆ ತೆಗೆಯಿಸಿರುತ್ತೇನೆ ನನಗೆ ಕ್ರಯ ಪತ್ರ ಎನು ಎಂದು ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು 10 ಲಕ್ಷ 8 ಲಕ್ಷ ಎಂಬುವುದನ್ನು ಕೇವಲ ಒಡ್ಡಕಣ್ಣನವರ ಇವರು ಹೇಳಿದ ಆಧಾರದ ಮೇಲೆ ಹೇಳುತ್ತಿದ್ದೇನೆಂದರೆ ಸಾಕ್ಷಿ ಮೊದಲು ಹೌದು ಎಂದು ನುಡಿದು ನಂತರ ಮ್ಯೂಟೇಶನನಲ್ಲಿ ಅದು ಎಂಟ್ರಿ ಇದೆ ಎಂದು ನುಡಿಯುತ್ತಾರೆ.

ಪಿ ಡಬ್ಲ್ಯೂಃ1

ದಿಃ18-04-1995 ರಂದು ಆದಂತಹ ಕ್ರಯ ಪತ್ರದಲ್ಲಿ ರೂ.1,80,000/- ಗಳನ್ನು ಕ್ರಯದ ಮೊತ್ತ ಎಂದು ಬರೆಯಲಾಗಿದೆ ಎಂದು ಸಾಕ್ಷಿಗೆ ನಿಶಾನೆ 2 ರ 2 ನೇ ಪುಟವನ್ನು ತೋರಿಸಿ ಸೂಚಿಸಿದಾಗ ಸಾಕ್ಷಿ ಅದನ್ನು ನೋಡಿ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿ ರೂ.10 ಲಕ್ಷ್ಯಗಳೆಂದು ಹೇಳಿದ್ದು ಅದನ್ನು ತೋರಿಸಲು ದಾಖಲೆ ತಂದು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಪ್ರಯತ್ನ ಮಾಡುತ್ತೇನೆ ಎನ್ನುತ್ತಾರೆ. ಸದರಿ ಆಸ್ತಿಯನ್ನು 1,80,000/- ಗಳಿಗೆ ಮಾರಾಟ ಮಾಡಿದ್ದರು ಕೂಡಾ ನಾನು 10,00,000/- ಗಳಿಗೆ ಮಾರಾಟ ಮಾಡಿರುತ್ತಾರೆಂದು ಹಾಗೂ ಕಡಿಮೆ ಮೌಲ್ಯವನ್ನು ತೋರಿಸಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡಿದ ನಂತರ ಪ್ಲಾಟ ನಂಬರ 261 ಖರೀದಿ ಮಾಡಿದ್ದು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಆದಾದ ನಂತರ ಧಾರವಾಡ ಹಾಗೂ ಮುಂಬಯನ ಆಸ್ತಿ ಕೂಡಾ ಖರೀದಿ ಮಾಡಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ನನ್ನ ಅತ್ತೆ-ಮಾವ ಖರೀದಿ ಹಿಡಿದಿರುವ ಆಸ್ತಿ ಎಂದರೆ ಪ್ಲಾಟ ನಂಬರ 261 ಮಾತ್ರ ಎಂದರೆ ಸಾಕ್ಷಿ ಇಲ್ಲ ಎಲ್ಲರು ಸೇರಿ ಧಾರವಾಡ ಹಾಗೂ ಮುಂಬಯ ಆಸ್ತಿಯನ್ನು ಕೂಡಾ ಖರೀದಿ ಹಿಡಿದಿರುತ್ತಾರೆ ಆ ಸಮಯದಲ್ಲಿ ನಾವೆಲ್ಲರು ಒಟ್ಟು ಕುಟುಬದಲ್ಲಿ ಇದ್ದೇವು ಎಂದು ಸಾಕ್ಷಿ ನುಡಿಯುತ್ತಾರೆ. ಎಲ್ಲರು ಒಟ್ಟು ಕುಟುಂಬದಲ್ಲಿ ಇದ್ದಿದ್ದಕ್ಕೆ ಅವು ಒಟ್ಟು ಕುಟುಂಬದ ಆಸ್ತಿ ಎಂದು ಹೇಳುತ್ತೀರಾ ಎಂದರೆ ಸಾಕ್ಷಿ ಇಲ್ಲ ನನ್ನ ಮನೆಯವರು ಕೂಡಾ ಸದರಿ ಆಸ್ತಿ ಖರೀದಿಗೆ ಹಣ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಧಾರವಾಡದ ಆಸ್ತಿಯನ್ನು ಪ್ರತಿವಾದಿ ನಂಬರ 3 ತಮ್ಮ ಸ್ವಂತ ಹಣದಿಂದ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ಇಲ್ಲ ಅದು ಸುಳ್ಳು ಎಂದು ನುಡಿಯುತ್ತಾರೆ.

ವಿ ಎಚ್ ಬ್ಯಾಳಿ ಎಂದರೆ ನನ್ನ ಮಾವ ಮರಣ ಹೊಂದಿದ ನಂತರ ನನ್ನ ಅತ್ತೆ ಜೊತೆ ನಿಮ್ಮ ಸಂಬಂಧ ಹೇಗೆ ಇತ್ತು ಎಂದರೆ ಸಾಕ್ಷಿ ನಾವೆಲ್ಲರು ಚೆನ್ನಾಗಿ ಇದ್ದೇವು ಎನ್ನುತ್ತಾರೆ. ನನ್ನ ಅತ್ತೆ ಅಂದರೆ ಪ್ರತಿವಾದಿ ನಂಬರ 1 ರವರಿಗೆ ಕುಟುಂಬ ಪಿಂಚಣಿ ಬರುತ್ತದೆ ಎಂದರೆ ಸರಿ. ನನ್ನ ಯಜಮಾನರು ಬದುಕಿದ್ದಾಗ 1 ನೇ ಪ್ರತಿವಾದಿಗೆ ಆಸ್ತಿ ಸಂಬಂದ ಹಾಗೂ ಹಣದ ಸಂಬಂಧ ಬಹಳ ತೊಂದರೆ ಕೊಡುತ್ತಿದ್ದರು ಎಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ. ಪ್ರತಿವಾದಿ ನಂಬರ 1 ರವರಿಗೆ ನಾನು ಹಾಗೂ ನನ್ನ ಗಂಡ ಹೊಡೆಯುವುದು



ಬಡಿಯುವುದು ಮಾಡಿ ಮಾನಸಿಕವಾಗಿ ತೊಂದರೆ ಕೊಡುತ್ತಿದೇವು ಎಂದೆ ಸಾಕ್ಷಿ ಸತ್ಯವಾಗಲು ಇಲ್ಲ ಎನ್ನುತ್ತಾರೆ. ಹಣ ಕೊಡುವುದಿಲ್ಲ ಎಂದಾದರೆ ಮನೆಯ ಸಾಮಾನುಗಳನ್ನು ಒಡೆಯುತ್ತೇವೆಂದು ನಾವಿಬ್ಬರು ಅವರಿಗೆ ತುಂಬಾ ತೊಂದರೆ ಕೊಡುತ್ತಿದ್ದೇವು ಎಂದರೆ ಸಾಕ್ಷಿ

ಇಲ್ಲ ಎನ್ನುತ್ತಾರೆ. ನಮ್ಮ ತೊಂದರೆ ತಡೆಯಲಾರದೆ ಅವರು ಎಸ.ಎನ.ಹರ್ಲಾಪೂರ ಎಂಬ ವಕೀಲರನ್ನು ಭೇಟಿಯಾಗಿದ್ದರು ಎಂದರೆ ಸಾಕ್ಷಿ ಇಲ್ಲ ಎಲ್ಲ ಸುಳ್ಳು ಎನ್ನುತ್ತಾರೆ. ಈ ಸಂಬಂಧ ಸದರಿ ವಕೀಲರು ನಮ್ಮ ಮೇಲೆ ದೂರು ಕೊಡಲು ಸೂಚಿಸಿದ್ದು ಅದರಂತೆ ನನ್ನ ಅತ್ತೆ ನನ್ನ ಮತ್ತು ನನ್ನ ಗಂಡನ ವಿರುದ್ಧ ಪೋಲೀಸ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ಇದನ್ನೆಲ್ಲಾ ಮಾಡಿಸಿದವರು ಸತೀಶ ಎನ್ನುವವರು ಎಂದು ನುಡಿಯುತ್ತಾರೆ. ಸದರಿ ಸತೀಶ ಅವರು ಎನು ಮಾಡುತ್ತಿದ್ದರು ಎಂದರೆ ಸಾಕ್ಷಿ ಅವರು ನಮ್ಮನ್ನು ಮನೆಯಿಂದ ಹೊರಗಡೆ ಹಾಕಿ ಹಾಗೆ ಮಾಡಿ ಹೀಗೆ ಮಾಡಿ ಎಂದು ಅವರಿಗೆ ಹೇಳಿ ಕೊಡುತ್ತಿದ್ದರು ಎನ್ನುತ್ತಾರೆ. ನನ್ನ ಮಗ ಹಾಗೂ ಸೊಸೆಯನ್ನು ಜೈಲಿಗೆ ಹಾಕಿಸಿದರೆ ನಮ್ಮ ಮರ್ಯಾದೆ ಹೋಗುತ್ತದೆ ಎಂಬ ಕಾರಣಕ್ಕೆ ಎಫ.ಐ.ಆರ ಮಾಡಿಸಲಾರದಂತೆ ಅವರು ಪ್ರಕರಣವನ್ನು ಮುಗಿಸಿದರು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ನಾವು ಕೊಡುವ ತೊಂದರೆಯನ್ನು ಸಹಿಸಲಾರದೆ ಸತೀಶರವರು ನಮ್ಮ ಅತ್ತೆಯನ್ನು USA ಗೆ ಕರೆದುಕೊಂಡು ಹೋದರು ಎಂದರೆ ಸಾಕ್ಷಿ ಅವರ ಮಕ್ಕಳು ಚಿಕ್ಕವರಿದ್ದ ಕಾರಣ ಅವರನ್ನು ನೋಡಿಕೊಳ್ಳುವವರು ಯಾರು ಇರಲಿಲ್ಲ ಎಂಬ ಕಾರಣಕ್ಕೆ ಅವರನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಕೊಡುವ ತೊಂದರೆಯನ್ನು ಸಹಿಸಲಾರದೆ ಆಕೆಯನ್ನು ಕರೆದುಕೊಂಡು ಹೋಗಿದ್ದರು ಕೂಡಾ ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಅದು ಸರಿಯಲ್ಲ. ಅವರು USA ನಿಂದ ಬರುತ್ತಿದ್ದಂತೆ ನೀವು ಪ್ಲಾಟ ನಂಬರ 261 ನಮಗೆ ಗಿಫ್ಟ ಮಾಡಲೆಬೇಕೆಂದು ಆಕೆಗೆ ಹೆದರಿಸಿ ಬೆದರಿಸಿ ಗಿಫ್ಟ ಮಾಡಿಸಿಕೊಂಡೆವು ಎಂದರೆ ಸಾಕ್ಷಿ ಇಲ್ಲ ಅವರು ಆಸ್ತಿ ಕೊಡಿ ಎಂದು ಒತ್ತಾಯ ಮಾಡಿದ್ದಕ್ಕೆ ನೀನು ಹಣ ಕೊಟ್ಟಿದ್ದೀಯಾ ನಿನ್ನ ಆಸ್ತಿಯನ್ನು ನೀನು ತೆಗೆದುಕೊ ಎಂದು ಅವರೆ ಆಸ್ತಿಯನ್ನು ಗಿಫ್ಟ ಮಾಡಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಪ್ಲಾಟ ನಂಬರ 261 ಈಗ ನನ್ನ ಹಾಗೂ ನನ್ನ ಮಕ್ಕಳ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಹೌದು ನಮ್ಮ ಮನೆಯವರ ಹೆಸರು ಕೂಡಾ ಸೇರಿದೆ ಎನ್ನುತ್ತಾರೆ. ನನ್ನ ಮನೆಯವರ ವಾರಸಾ ದೃಢಿಕರಣ ಪತ್ರದಲ್ಲಿ ನಿಮ್ಮ ಅತ್ತೆ ಹೆಸರು ಇದೇಯಾ ಎಂದರೆ ಸಾಕ್ಷಿ ಅವರ ಹೆಸರು ಇಲ್ಲ ನಮ್ಮ ಮನೆಯವರದು ನಾವೆ



ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಅವರ ಹೆಸರು ಹಚ್ಚಲಿಲ್ಲವೆಂದರೆ ಸಾಕ್ಷಿ ಅವರು ಎಲ್ಲ ಆಸ್ತಿಯನ್ನು ಸತೀಶ ಬ್ಯಾಳಿ ಇವರ ಹೆಸರಿಗೆ ಬರೆದಿದ್ದರು ಮತ್ತೆ ಇದನ್ನು ಸಹ ಕಿತ್ತುಕೊಳ್ಳುತ್ತಾರೆ ಎಂಬ ಕಾರಣಕ್ಕೆ ನಾವು ಅವರ ಹೆಸರನ್ನು ಹಾಕಿಸಲಕಿಲ್ಲ ಎನ್ನುತ್ತಾರೆ. ದಿಃ25-07-2020 ರಂದು ನಾನು ಹಾಗೂ ನನ್ನ ಯಜಮಾನರು ಸೇರಿ ನನ್ನ ಅತ್ತೆ ಅಂದರೆ 1 ನೇ ಪ್ರತಿವಾದಿಗೆ ಬಂಗಾರದ ಗುಂಡಗಡಗಿ ಯನ್ನು ನಮಗೆ ಕೊಡಬೇಕು

ಇಲ್ಲದಿದ್ದರೆ ನಿನ್ನನ್ನು ಮೇಲಿಂದ ಕೆಳಗೆ ತಳ್ಳಿ ಮುಗಿಸುತ್ತೇವೆಂದು ಹೇಳಿ ಅವರಿಗೆ ಬೆದರಿಸಿ ಅವರಿಂದ ಅವರ ಬಂಗಾರದ ಗುಂಡಗಡಗಿಯನ್ನು ಕಿತ್ತುಕೊಂಡೆವು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಬಂಗಾರದ ಗುಂಡಗಡಗಿಯನ್ನು ತೆಗೆದುಕೊಂಡಿದ್ದಕ್ಕೆ ಅವರು ಹಿರಿಯರನ್ನು ಸೇರಿಸಿದ್ದು ಆ ಸಮಯದಲ್ಲಿ ನಾವು ಅದನ್ನು ತೆಗೆದುಕೊಂಡ ಬಗ್ಗೆ ಲಿಖಿತವಾಗಿ ಬರೆದುಕೊಟ್ಟೆವು ಎಂದರೆ ಸಾಕ್ಷಿ ಬರೆದುಕೊಂಡಿದ್ದು ನಿಜ ಆದರೆ ಬಂಗಾರದ ಗುಂಡಗಡಗಿಯನ್ನು ನಾವು ತೆಗೆದುಕೊಳ್ಳಲಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ಸತೀಶ ಬ್ಯಾಳಿ ಬರಲಿ ಆತನ ಎದುರಿಗೆ ಕೊಡುತ್ತೇನೆಂದು ತಾವೇ ಇಟ್ಟುಕೊಂಡರು ಎಂದು ಸಾಕ್ಷಿ ನುಡಿಯುತ್ತಾರೆ. ಬಂಗಾರದ ಗುಂಡಗಡಗಿಯನ್ನು ನಾವು ತೆಗೆದುಕೊಂಡ ನಂತರ ಬರೆದುಕೊಟ್ಟೆವು ಈಗ ನಾವು ಅದನ್ನು ತೆಗೆದುಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಬರೆದುಕೊಟ್ಟಿದ್ದು ನಿಜ ಆದರೆ ಅದನ್ನು ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಇವತ್ತಿನವರೆಗೂ ನಾನು 1 ನೇ ಪ್ರತಿವಾದಿಯನ್ನು ಮನೆಯಿಂದ ಹೊರ ಹಾಕಲು ನೋಡುತ್ತಿದ್ದೇನೆಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ದಾವಾ ಆಸ್ತಿಗಳು ಬ್ಯಾಳಿ ಇವರ ಸ್ವಂತ ಆಸ್ತಿಗಳಾಗಿದ್ದು ಅದೇ ರೀತಿ ಧಾರವಾಡದ ಆಸ್ತಿ ಪ್ರತಿವಾದಿ 3 ರವರಿಗೆ ಸೇರಿದ್ದಾಗಿದ್ದು ಹಾಗೂ ವಿಲ್ ಆದ ಬಗ್ಗೆ ಎಲ್ಲ ವಿಷಯ ಗೊತ್ತಿದ್ದರ ಕೂಡಾ ನಾನು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಕೇಸ ದಾಖಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ